# ನಗರಸಭಾ ಕಾರ್ಯಾಲಯ, ರಾಣೇಬೆನ್ನೂರು

ಪತ್ರಸಂಖ್ಯೆ: ನಸರಾ:ಕಾಮಗಾರಿ:ಎಸ್‌ಎಫ್‌ಸಿ:ಟೆಂವಹಿ:1/2007-08 ದಿನಾಂಕ:20/07/2007

## -: ಅಲ್ಪಾವಧಿ ಟೆಂಡರ್ ಪ್ರಕಟಣೆ :-

ಕರ್ನಾಟಕ ಪುರಸಭೆ ಕಾಯಿದೆ 1964 ಹಾಗೂ ಕ.ಸಾ.ಸಂಪಾ.ಅ 1999 (ತಿದ್ದುಪಡಿ ನಿಯಮಗಳಂತೆ)ರ ಪ್ರಕಾರ ಲೋಕೋಪಯೋಗಿ ಇಲಾಖೆಯ ಸಿವಿಲ್ ಗುತ್ತಿಗೆದಾರರೆಂದು ಲೈಸೆನ್ಸ್ ಪಡೆದ ರಾಣೆಬೆನ್ನೂರ ನಗರಸಭೆಯ ಕಛೇರಿಯಲ್ಲಿಯೂ ಸಹ ಗುತಿಗೆದಾರರೆಂದು ನೊಂದಾಯಿಸಿದವರಿಗೆ ತಿಳಿಯಪಡಿಸುವುದೇನೆಂದರೆ, 2007-08ನೇ ಸಾಲಿನ ಎಸ್,ಎಫ್,ಸಿ ಮುಕ್ತ ನಿಧಿ ಅನುದಾನದಡಿ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲು ನಿರ್ಣಯಿಸಲಾಗಿದ್ದು, ಸದರಿ ಕಾಮಗಾರಿಗಳಿಗೆ ದ್ವಿಪ್ರತಿಗಳಲ್ಲಿ ಐಟಂವಾರು ಟೆಂಡರನ್ನು ಕರೆಯಲಾಗಿದೆ. ತಾಂತ್ರಿಕ ಹಾಗೂ ಆರ್ಥಿಕ ಬಿಡ್ಡಗಳನ್ನು ಪ್ರತ್ಯೇಕವಾಗಿ ದಿನಾಂಕ:06/08/2007ರಂದು 4:30ಘಂಟೆ ಯೊಳಗಾಗಿ ಸಲ್ಲಿಸಬೇಕು. ಟೆಂಡರ ನಮೂನೆ ಸಲುವಾಗಿ ಅರ್ಜಿ ಸಲ್ಲಿಸುವ ಕೊನೆ ದಿನಾಂಕ:27/07/2007 ಆಗಿರುತ್ತದೆ.

### I . ರಸ್ತೆ ಕಾಮಗಾರಿಗಳು

| ಪ್ಯಾಕೇಜ | ಅ. ನಂ. | ಕಾಮಗಾರಿಗಳ ವಿವರ | ಅಂದಾಜು ರಕಂ | ಇ.ಎಂ.ಡಿ. ಹಣ | ಗುತ್ತಿಗೆದಾರರ ವರ್ಗ |
|---|---|---|---|---|---|
| 1 | 2 | 3 | 4 | 5 | 6 |
| ಪ್ಯಾಕೇಜ 1 | 1 | ದೊಡ್ಡಪೇಟೆ ಮುಖ್ಯರಸ್ತೆ ಸುಭಾಸ ಚೌಕನಿಂದ ರೈಲ್ವೆಗೇಟವರೆಗೆ ಸಿಮೆಂಟ್ ಕಾಂಕ್ರೀಟ ರಸ್ತೆ ನಿರ್ಮಿಸುವುದು. | 39.02 ಲಕ್ಷ | 39.000/- | 1ನೇ ದರ್ಜೆ |
| ಪ್ಯಾಕೇಜ 2 | 1 | ನಗರಸಭೆ ವ್ಯಾಪ್ತಿಯ ಮುಕ್ತಿಧಾಮ ರಸ್ತೆ ಶ್ರೀ ಗುರು ಕೊಟ್ಟುರೇಶ್ವರ ಪ್ರಾಥಮಿಕ ಶಾಲೆಯಿಂದ ಮುಕ್ತಿಧಾಮದ ಗೇಟವರೆಗೆ ಹಾಗೂ ಗುತ್ತಲ ರಸ್ತೆವರೆಗೆ ಮರುಡಾಂಬರೀಕರಣ ಮಾಡುವುದು. (ಮಿನಿ ಮಿಶ್ರಣ) (3.78 ಲಕ್ಷ) | 25.56 ಲಕ್ಷ | 25.560/- | 1ನೇ ದರ್ಜೆ |
| | 2 | ನಗರಸಭೆಯ ಮೃತ್ಯುಂಜಯ ನಗರದ ಮಠದ ಹಿಂದಿನ ರಸ್ತೆಗಳನ್ನು ಸುಧಾರಣೆ ಮಾಡುವುದು (6.10 ಲಕ್ಷ) | | | |
| | 3 | ನಗರಸಭೆ ವ್ಯಾಪ್ತಿಯ ರಂಗನಾಥನಗರ ಶ್ರೀ ನಂದಿಹಳ್ಳಿ ಗೌಡೊನ್‌ದಿಂದ ದೊಡ್ಡಪೇಟೆ ರಸ್ತೆಯಿಂದ ಗುಡಶೆಡ್ ರಸ್ತೆವರೆಗೆ ಮರು ಡಾಂಬರೀಕರಣ ಮಾಡುವುದು.(ಮಿನಿ ಮಿಶ್ರಣ)(1.81 ಲಕ್ಷ) | | | |
| | 4 | ನಗರಸಭೆ ವ್ಯಾಪ್ತಿಯ ವಾಗೀಶ ನಗರದ 3, 4, 6, 7ನೇ ಕ್ರಾಸ್‌ರಸ್ತೆಗಳಿಗೆ ಮರುಡಾಂಬರೀಕರಣ ಮಾಡುವುದು. (ಮಿನಿ ಮಿಶ್ರಣ) (4.23 ಲಕ್ಷ) | | | |
| | 5 | ಚೌಡೇಶ್ವರಿ ನಗರದಲ್ಲಿ ಬರುವ 1ರಿಂದ 6 ಅಡ್ಡರಸ್ತೆಗಳಿಗೆ ಮರುಡಾಂಬರೀಕರಣ ಮಾಡುವುದು. (ಮಿನಿ ಮಿಶ್ರಣ) ( 5.14 ಲಕ್ಷ) | | | |
| | 6 | ನಗರಸಭೆ ವ್ಯಾಪ್ತಿಯ ರಾಜೇಶ್ವರಿ ನಗರದ ಪಿ,ಬಿ ರಸ್ತೆ 4ನೇ ಮುಖ್ಯ ರಸ್ತೆಗೆ ಮರುಡಾಂಬರೀಕರಣ ಮಾಡುವುದು. (ಮಿನಿ ಮಿಶ್ರಣ) (1.56 ಲಕ್ಷ) | | | |
| | 7 | ನಗರಸಭೆ ವ್ಯಾಪ್ತಿಯ ರಾಜೇಶ್ವರಿ ನಗರದ 1ನೇ ಮುಖ್ಯ ರಸ್ತೆಗೆ ಹಾಗೂ ಕ್ರಾಸ್‌ರಸ್ತೆ ಅಭಿವೃದ್ಧಿಪಡಿಸುವುದು. (ಮಿನಿ ಮಿಶ್ರಣ) (2.94 ಲಕ್ಷ) | | | |
| ಪ್ಯಾಕೇಜ 3 | 1 | ನಗರಸಭೆಯ ವ್ಯಾಪ್ತಿಯ ಹಳೇ ಅಂತರವಳ್ಳಿ ರಸ್ತೆಯಿಂದ ಅಂಬೇಡ್ಕರ ಶಾಲೆಗೆ ಹೋಗುವ ರಸ್ತೆ ಸುಧಾರಣೆ ಮಾಡುವುದು. (13.88 ಲಕ್ಷ) | 28.30 ಲಕ್ಷ | 28.300/- | 1ನೇ ದರ್ಜೆ |
| | 2 | ನಗರಸಭೆಯ ವ್ಯಾಪ್ತಿಯ ಕುರಬಗೇರಿ ಬನಶಂಕರಿ ದೇವಸ್ಥಾನದಿಂದ ಹಲಗೇರಿ ರಸ್ತೆವರೆಗೆ ರಸ್ತೆ ಸುಧಾರಣೆ ಮಾಡುವುದು. (14.42 ಲಕ್ಷ) | | | |
| ಪ್ಯಾಕೇಜ 4 | 1 | ಸಂಗಮ್ ಸರ್ಕಲ್‌ನಿಂದ ಅಶೋಕಸರ್ಕಲ್‌ವರೆಗೆ ಡಾಂಬರೀಕರಣ ಮಾಡುವುದು. (2.50 ಲಕ್ಷ) ಹಾಟ್ ಮಿಕ್ಸ್ | 22.46 ಲಕ್ಷ | 22.460/- | 1ನೇ ದರ್ಜೆ |
| | 2 | ರಾಣೇಬೆನ್ನೂರ ನಗರದ ಮೇಡ್ಲೇರಿ ರಸ್ತೆಯಿಂದ ಮಾನ್ವಿ ಕಂಪನಿ ರಸ್ತೆ ಸುಧಾರಣೆ ಮಾಡುವುದು. (6.87 ಲಕ್ಷ) ಹಾಟ್ ಮಿಕ್ಸ್ | | | |

| | | | | | |
|---|---|---|---|---|---|
| | 3 | ನಗರಸಭೆ ವ್ಯಾಪ್ತಿಯ ಅಶೋಕ ಸರ್ಕಲ್‌ದಿಂದ ರೈಲ್ವೆಸ್ಟೇಷನ್‌ರಸ್ತೆವರೆಗೆ ಮರು ಡಾಂಬರೀಕರಣ ಮಾಡುವುದು. (ಎಸ್ ಡಿ ಬಿ ಸಿ) (2.65 ಲಕ್ಷ) | | | |
| | 4 | ಎಂ ಜಿ ರಸ್ತೆ ಚಕಮಿಕಿ ದೇವಸ್ಥಾನದ ಸರ್ಕಲ್‌ನಿಂದ ದೊಡ್ಡ ಪೇಟೆ ರಸ್ತೆ ಸುಭಾಸ ಚೌಕ್‌ವರಗಿನ ರಸ್ತೆಗೆ ಹಾಟ್ ಮಿಕ್ಸ್‌ನಿಂದ ಮರುಡಾಂಬರೀಕರಣ ಮಾಡುವುದು. (02.16 ಲಕ್ಷ) | | | |
| | 5 | ವಾ.ನಂ 18ರಲ್ಲಿರುವ ಶಂಕರ ಚಿತ್ರಮಂದಿರದಿಂದ ನೆಹರು ಮಾರುಕಟ್ಟೆಪ್ರದೇಶದಲ್ಲಿನ ರಸ್ತೆಗಳಿಗೆ ಹಾಟ್ ಮಿಕ್ಸ್‌ನಿಂದ ಮರುಡಾಂಬರೀಕರಣ ಮಾಡುವುದು. (08.28 ಲಕ್ಷ) | | | |
| **ಪ್ಯಾಕೇಜ 5** | 1 | ನಗರಸಭೆಯ ವ್ಯಾಪ್ತಿಯ ಮಾರುತಿ ನಗರದಲ್ಲಿಯ ಹೊಸ ಜ್ಯೂನಿಯರ್ ಕಾಲೇಜ ರಸ್ತೆ 500ಮೀ, ಮಾರುತಿನಗರದ 1ನೇ ಮುಖ್ಯರಸ್ತೆ 450ಮೀ ಹಾಗೂ 2ನೇ ಮುಖ್ಯರಸ್ತೆ ಉಳಿದ ಭಾಗ ಸುಧಾರಣೆ ಮಾಡುವುದು. (17.25 ಲಕ್ಷ) | 39.55 ಲಕ್ಷ | 39.550/- | 1ನೇ ದರ್ಜೆ |
| | 2 | ವಿ.ನಂ 29 ಮಾರುತಿ ನಗರದ ರಿ.ಸ.ನಂ 312ರಲ್ಲಿ ಪಶ್ಚಿಮ ಭಾಗದ ಬ್ಲಾಕ್‌ನಲ್ಲಿ 2,3,5 ಕ್ರಾಸ್ ರಸ್ತೆಗಳಿಗೆ ಹಾಗೂ 3ನೇ ರಸ್ತೆಗೆ ಡಾಂಬರೀಕರಣ ಮಾಡುವುದು (5.92 ಲಕ್ಷ) | | | |
| | 3 | ವಾರ್ಡ ನಂ 29 ಮಾರುತಿ ನಗರದ ರಿ.ಸ.ನಂ 311ರಲ್ಲಿ ಬಾಕಿ ಉಳಿದ ರಸ್ತೆಗಳಿಗೆ ಖಡಿಕರಣ ಮಾಡುವುದು. (2.38 ಲಕ್ಷ) | | | |
| | 4 | ವಾರ್ಡ ನಂ 29 ಮಾರುತಿ ನಗರದ ರಿ.ಸ.ನಂ 311ರಲ್ಲಿ ಹಾಗು 312ರಲ್ಲಿ ಬಾಕಿ ಉಳಿದ ರಸ್ತೆಗಳಿಗೆ ಖಡಿಕರಣ ಮಾಡುವುದು. (7.00 ಲಕ್ಷ) | | | |
| | 5 | ವಾರ್ಡ ನಂ 29 ಮಾರುತಿ ನಗರದ ರಿ.ಸ.ನಂ 312 ರಿಂದ ಬೆನಕನಕೊಂಡ ರಸ್ತೆವರೆಗೆ ಖಡಿಕರಸ್ತೆ ಮಾಡಿ ಡಾಂಬರೀಕರಣ ಮಾಡುವುದು. (7.00 ಲಕ್ಷ) | | | |
| **ಪ್ಯಾಕೇಜ 6** | 1 | ಸಿದ್ದೇಶ್ವರ ನಗರದ ಹಳೇಬ್ಯಾಡಗಿ ರಸ್ತೆಗೆ ಡಾಂಬರೀಕರಣ ಮಾಡುವುದು. (ಮಿನಿ ಮಿಶ್ರಣ) (4.97 ಲಕ್ಷ) | 13.74 ಲಕ್ಷ | 13.740/- | 2ನೇ ದರ್ಜೆ |
| | 2 | ಎಂ ಜಿ ರಸ್ತೆಯ ಅನಂತ ಹೋಟೆಲ್‌ದಿಂದ ಫಿಶ್ ಮಾರ್ಕೆಟ್ ರಸ್ತೆಯ ಜುಮ್ಮಾ ಮಸೀದಿಗೆ ಹೋಗುವ ರಸ್ತೆಯವರೆಗೆ ಮಿನಿ ಮಿಕ್ಸ್‌ದಿಂದ ಮರುಡಾಂಬರೀಕರಣ ಮಾಡುವುದು. (1.44ಲಕ್ಷ) | | | |
| | 3 | ದೊಡ್ಡಪೇಟೆ ರಸ್ತೆ ಸುಭಾಸಚೌಕದಿಂದ ಮಹಾವೀರ ರಸ್ತೆ ಗುಡ್‌ಶೆಡ್ ರಸ್ತೆಯವರೆಗೆ ಮಿನಿ ಮಿಕ್ಸ್‌ದಿಂದ ಮರುಡಾಂಬರೀಕರಣ ಮಾಡುವುದು. (1.33ಲಕ್ಷ) | | | |
| | 4 | ಗುಡ್‌ಶೆಡ್ ರಸ್ತೆಯಿಂದ ಸುಣಗಾರ ಓಣಿಯ ಶ್ರೀ ಬಸವಣ್ಣ ದೇವರ ಗುಡಿಯವರಿಗಿನ ರಸ್ತೆಗೆ ಮಿನಿ ಮಿಕ್ಸ್‌ದಿಂದ ಮರುಡಾಂಬರೀಕರಣ ಮಾಡುವುದು. (0.70ಲಕ್ಷ) | | | |
| | 5 | ವಾರ್ಡ ನಂ31ರ ಹಳೇ ಅಂತರವಳ್ಳಿ ರಸ್ತೆಯ ವಿದ್ಯಾನಗರದ 1,2,3,4,6,7,8,9ನೇ ಅಡ್ಡ ರಸ್ತೆ ಗಳಿಗೆ ಕಡಿ ಕರಣ ಮಾಡಿ ಮಿನಿ ಮಶ್ರಣದಿಂದ ಡಾಂಬರಿಕರಣ ಮಾಡುವುದು.(5.30ಲಕ್ಷ) | | | |

## <u>ಷರತ್ತು ಮತ್ತು ನಿಬಂಧನೆಗಳು</u>

1) ಈ ಕಾಮಗಾರಿಗಳನ್ನು ನಿರ್ವಹಿಸಲು 1ನೇ ಮತ್ತು 2ನೇ ದರ್ಜೆ ಮೇಲ್ಪಟ್ಟು ಅರ್ಹತೆ ಹೊಂದಿದವರಾಗಿರತಕ್ಕದ್ದು. ಹಾಗೂ ಅರ್ಜಿಯ ಜೊತೆ ಗುತ್ತಿಗೆದಾರರು ಬಾವ ಚಿತ್ರ ಸಹಿತದ ಪರವಾನಗಿ ಪತ್ರ (ಪಿ.ಡಬ್ಲ್ಯು.ಡಿ.& ನಗರಸಭೆ)ದ ದೃಢೀಕೃತ ಪ್ರತಿಯನ್ನು ಸಲ್ಲಿಸತಕ್ಕದ್ದು.
2) ಲೋಕೋಪಯೋಗಿ ಇಲಾಖೆಯಲ್ಲಿ ಲೈಸೆನ್ಸ್ ಹೊಂದಿದವರು ನಗರಸಭೆಯಲ್ಲಿಯೂ ಕೂಡ ಚಾಲ್ತಿ ಸಾಲಿನಲ್ಲಿ ನೋಂದಾಯಿತ ಗುತ್ತಿಗೆದಾರರಾಗಿರಬೇಕು.
3) ಡಾಂಬರೀಕರಣ ಕಾಮಗಾರಿಗಾಗಿ ಟೆಂಡರ್ ಹಾಕುವವರು ಕಾಮಗಾರಿಗೆ ಅವಶ್ಯಕವಾದ ಯಂತ್ರೋಪಕರಣ ಗಳನ್ನು ಸ್ವಂತಕ್ಕೆ ಹೊಂದಿರತಕ್ಕದ್ದು/ಬಾಡಿಗೆ ರೀತಿಯಿಂದ (ದಾಖಲೆ ಸಹಿತ) ಹೊಂದಿದವರು ಸದರಿ ದಾಖಲಾತಿಗಳೊಂದಿಗೆ ಕೆಲಸ ನಿರ್ವಹಿಸಿದ ಅನುಭವ ಪ್ರಮಾಣ ಪತ್ರದೊಂದಿಗೆ ಅರ್ಜಿ ಸಲ್ಲಿಸುವ ದಿನದಂದು ಹಾಜರುಪಡಿಸಿದವರಿಗೆ ಮಾತ್ರ ಟೆಂಡರ್‌ನಲ್ಲಿ ಭಾಗವಹಿಸಲು ಅವಕಾಶವಿರುತ್ತದೆ.

4) ಕಾಮಗಾರಿ ಕೆಲಸ ಪೂರ್ಣಗೊಳಿಸಬೇಕಾದ ಅವಧಿ 6 ತಿಂಗಳುಗಳಾಗಿರುತ್ತದೆ. (ಮಳೆಗಾಲ ಹೊರತಪಡಿಸಿ)
5) ಟೆಂಡರ ನಮೂನೆಯ ಬೆಲೆ ಕಾಮಗಾರಿಯ ಅಂದಾಜು ಮೊತ್ತದ ಶೇ 0.1ರಷ್ಟು ಹಾಗೂ + ತೆರಿಗೆ.

6) ಟೆಂಡರ ನಮೂನೆ ಸಲುವಾಗಿ ಮಾನ್ಯತೆಪಡೆದ ಗುತ್ತಿಗೆದಾರರು ಟೆಂಡರ್ ಫಾರ್ಮನ ಶುಲ್ಕದೊಂದಿಗೆ ಅರ್ಜಿಗಳನ್ನು ಈ ಕಛೇರಿಯಲ್ಲಾಗಲಿ ಅಥವಾ ಮಾನ್ಯ ಜಿಲ್ಲಾ ನಗರಾಭಿವೃದ್ದಿ ಕೋಶ, ಜಿಲ್ಲಾಧಿಕಾರಿಗಳ ಕಛೇರಿ ಹಾವೇರಿ ಇಲ್ಲಿ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ:27/07/2007 ಸಂಜೆ 5.30 ರ ಒಳಗಾಗಿ ಇರುತ್ತದೆ.
7) ತಯಾರಿಸಿದ ಟೆಂಡರ್ ನಮೂನೆಗಳನ್ನು ಗುತ್ತಿಗೆದಾರರಿಗೆ ಈ ಕಾರ್ಯಾಲಯದಲ್ಲಿ ದಿನಾಂಕ:03/08/2007 ರಿಂದ ಕಛೇರಿ ವೇಳೆಯಲ್ಲಿ ಮಾತ್ರ ನೀಡಲಾಗುವುದು.
8) ಎಲ್ಲಾ ವಿವರಗಳನ್ನು ಭರ್ತಿ ಮಾಡಿದ ಟೆಂಡರ್‌ನ ನಮೂನೆ ಜೊತೆಗೆ ಇ.ಎಂ.ಡಿ.ಹಣವನ್ನು ನಗದಾಗಿ ನಗರಸಭೆ ನಿಧಿಗೆ ಪಾವತಿಸಿ ಅದರ ರಸೀತಿಯೊಂದಿಗೆ ಅಥವಾ ಪೌರಾಯುಕ್ತರ ಪದನಾಮಾಂಕಿತದಲ್ಲಿ ಡಿ.ಡಿ.ಪಡೆದು ದ್ವಿಪ್ರತಿಗಳ ಟೆಂಡರ್ ನಮೂನೆಯೊಂದಿಗೆ ಲಗತ್ತಿಸಿ, ಲಕೋಟೆಯನ್ನು ಸೀಲ್ (ಅರಗಿನಿಂದ) ಮಾಡಿ, ಇದೇ ಉದ್ದೇಶಕ್ಕಾಗಿ ನಗರಸಭೆಯಲ್ಲಿ ಇಡಲಾದ ಅಥವಾ ಜಿಲ್ಲಾ ನಗರಾಭಿವೃದ್ದಿ ಕೋಶ, ಜಿಲ್ಲಾಧಿಕಾರಿಗಳ ಕಛೇರಿ ಹಾವೇರಿ ಇಲ್ಲಿ ಇಡಲಾದ ಟೆಂಡರ್ ಪೆಟ್ಟಿಗೆಯಲ್ಲಿ ದಿನಾಂಕ:06/08/2007 ರ 4.30 ಘಂಟೆಗಳೊಳಗಾಗಿ ಹಾಕತಕ್ಕದ್ದು. ನಿಗಧಿತ ಅವಧಿ ನಂತರ ಬರುವ ಟೆಂಡರ್‌ಗಳನ್ನು ಯಾವುದೇ ರೀತಿಯಿಂದಲೂ ಸ್ವೀಕರಿಸಲಾಗುವುದಿಲ್ಲ.
9) ಟೆಂಡರ್ ಬಾಕ್ಸನ್ನು ದಿನಾಂಕ:07/08/2007 ರಂದು ರಾಣೇಬೆನ್ನೂರು ನಗರಸಭೆಯಲ್ಲಿ ಲಭ್ಯವಿದ್ದ ಗುತ್ತಿಗೆದಾರರ ಸಮ್ಮುಖದಲ್ಲಿ ಬೆಳಿಗ್ಗೆ 11.00 ಘಂಟೆಗೆ ತೆರೆಯಲಾಗುವುದು.
10) ಟೆಂಡರ್‌ಗಾಗಿ ಪಾವತಿಸಿದ ಇ.ಎಂ.ಡಿ. ಹಣಕ್ಕೆ ಬಡ್ಡಿ ನೀಡಲಾಗುವುದಿಲ್ಲ. ನಾಮಂಜೂರಾದ ಗುತ್ತಿಗೆದಾರರ ಇ.ಎಂ.ಡಿ.ಹಣವನ್ನು ಟೆಂಡರ್ ಮಂಜೂರಾದ ನಂತರ ಹಿಂದಿರುಗಿಸಲಾಗುವುದು.
11) ಮೇಲ್ಕಂಡ ಕಾಮಗಾರಿಗಳು ಪೂರ್ಣಗೊಂಡ ದಿನಾಂಕದಿಂದ ಕಾಮಗಾರಿ ನಿರ್ವಹಣೆಗೆ 2 ವರ್ಷಗಳ ಅವಧಿಗೆ ಗುತ್ತಿಗೆದಾರರು ಯಾವುದೇ ಹೆಚ್ಚಿನ ವೆಚ್ಚವಿಲ್ಲದೇ ನಿರ್ವಹಿಸತಕ್ಕದ್ದು. ಅಲ್ಲಿಯವರೆಗೆ ಇ.ಎಂ.ಡಿ. ಮತ್ತು ಎಸ್.ಡಿ.ಮೊತ್ತ ಹಿಂದಿರುಗಿಸಲಾಗುವುದಿಲ್ಲ.
12) ಗುತ್ತಿಗೆದಾರರು ಕಾಮಗಾರಿಯ ಪ್ರಾರಂಭಿಕ ಹಂತ, ಮಧ್ಯಂತರದ ಹಂತದಲ್ಲಿ ಹಾಗೂ ಮುಕ್ತಾಯದ ಹಂತದಲ್ಲಿಯ ಕಾಮಗಾರಿ ನಿರ್ವಹಣೆಯ ಬಾವ ಚಿತ್ರಗಳನ್ನು ಕಡ್ಡಾಯವಾಗಿ ನೀಡತಕ್ಕದ್ದು.
13) ಈ ಮೇಲೆ ನಮೂದಿಸಿದ ದಿನಾಂಕಗಳಂದು ಸರ್ಕಾರಿ ರಜೆಗಳು ಬಂದಲ್ಲಿ, ಕಛೇರಿಯ ಮುಂದಿನ ದಿನಾಂಕವೆಂದು ಬಾವಿಸತಕ್ಕದ್ದು.
14) ಟೆಂಡರ್ ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ನಗರಸಭೆ ಹೊಂದಿರುತ್ತದೆ.
15) ಟೆಂಡರ್‌ಗಾಗಿ ಇ.ಎಂ.ಡಿ. ಹಣ ಪಾವತಿಸದಿರುವ, ಚೆಕ್ಕುಗಳನ್ನು ಲಗತ್ತಿಸಿರುವ ಮತ್ತು ಮಾಹಿತಿ ಅಪೂರ್ಣವಿರುವ ಟೆಂಡರ್‌ಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ.
16) ಕಾಮಗಾರಿಯ ಅಂದಾಜು ಮೊತ್ತಕ್ಕಿಂತ ಕಡಿಮೆ ದರಕ್ಕೆ ಮಾಡಲು ಇಚ್ಚಿಸಿದ ಗುತ್ತಿಗೆದಾರರು ಕಡಿಮೆ ದರದ ಮೊಬಲಗಿಗೆ ಟೆಂಡರ್ ನಮೂನೆ ಜೊತೆಯಲ್ಲಿಯೇ ಡಿ.ಡಿ. ಅಥವಾ ನಗದು ರೂಪದಲ್ಲಿ ಪಾವತಿ ಮಾಡಿದ ರಸೀತಿಯೊಂದಿಗೆ ಟೆಂಡರ್ ನಮೂನೆ ಜೊತೆಗೆ ಲಗತ್ತಿಸಿ ಸಲ್ಲಿಸತಕ್ಕದ್ದು. (ಈ ಹಣವನ್ನು ತುಂಬದೇ ಕಡಿಮೆ ದರ ನಮೂದಿಸಿದ ಗುತ್ತಿಗೆದಾರರ ದರಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ.)
17) ಸರ್ಕಾರದ ಹಾಗೂ ಪೌರಾಡಳಿತ ನಿರ್ದೇಶನಾಲಯದ ಇತ್ತೀಚಿನ ಸುತ್ತೋಲೆ ಮತ್ತು ಮಾರ್ಗದರ್ಶನಗಳನ್ವಯ ನಡೆದುಕೊಳ್ಳಲು ಗುತ್ತಿಗೆದಾರರು ಬದ್ಧರಾಗಿರತಕ್ಕದ್ದು.
18) ಈ ಮೇಲ್ಕಾಣಿಸಿದ ಕಾಮಗಾರಿಗಳು ಸರಕಾರದ ನಿರ್ಧೇಶನದನ್ವಯ ಮೂರನೇ ವ್ಯಕ್ತಿಯ ತಪಾಸಣೆ ಮಾಡಿದ ನಂತರ ತೃಪ್ತಿಕರವಾಗಿದ್ದಲ್ಲಿ ಬಿಲ್ ಪಾವತಿಸಲಾಗುವುದು.
19) ಈ ಮೇಲಿನ ಕಾಮಗಾರಿಗಳಿಗೆ ಸರಕಾರದಿಂದ ಬರುವ ಅನುದಾನದಿಂದ ಬಿಲ್ ಪಾವತಿ ಮಾಡುವುದಿದ್ದು, ಹಣಕಾಸಿನ ಲಭ್ಯತೆಗೆ ಅನುಗುಣವಾಗಿ ಕೆಲಸದ ಆದೇಶಗಳನ್ನು ನೀಡಲಾಗುವುದು. ಮತ್ತು ಬಿಲ್‌ಗಳನ್ನು ಪಾವತಿಸಲಾಗುವುದು.
20) ಗುತ್ತಿಗೆದಾರರು ತಾಂತ್ರಿಕ ಸಿಬ್ಬಂದಿಯನ್ನು ನೇಮಿಸಿಕೊಂಡು ನಿರ್ವಹಿಸಬೇಕು. ಹಾಗೂ ನೇಮಿಸಿಕೊಂಡ ದಾಖಲಾತಿಗಳು ಹಾಗೂ ಅವರ ಒಪ್ಪಿಗೆ ಪತ್ರಗಳನ್ನು ಲಗತ್ತಿಸಬೇಕು.
21) ಹೆಚ್ಚಿನ ಮಾಹಿತಿಯನ್ನು ನಗರಸಭೆ ಕಾರ್ಯಾಲಯದ ಕಾಮಗಾರಿ ವಿಭಾಗದಲ್ಲಿ ಅಥವಾ ಕಛೇರಿಯ ವೆಬ್‌ಸೈಟ್ http://www.ranebennurcity.gov.in ರಲ್ಲಿ ಮಾಹಿತಿ ಪಡೆಯ ಬಹುದಾಗಿದೆ.

| | | |
|---|---|---|
| ಸಹಿ/– | ಸಹಿ/– | ಸಹಿ/– |
| **(ಎಂ.ಆರ್.ಗಿರಡ್ಡಿ)** | **(ಎಸ್.ಜಿ.ರಾಜಶೇಖರ್)** | **(ಎಂ. ಎಸ್. ಶ್ರೀಕರ) I.A.S.** |
| ಸ.ಕಾ.ನಿ.ಅಭಿಯಂತರರು | ಪೌರಾಯುಕ್ತರು, | ಆಡಳಿತಾಧಿಕಾರಿಗಳು, |
| ನಗರಸಭೆ, ರಾಣೇಬೆನ್ನೂರು. | ನಗರಸಭೆ, ರಾಣೇಬೆನ್ನೂರು. | ನಗರಸಭೆ, ರಾಣೇಬೆನ್ನೂರು , ಹಾಗೂ ಜಿಲ್ಲಾಧಿಕಾರಿಗಳು, ಹಾವೇರಿ. |